ಯೋಜನ ಸರ್ಕಾರಕ್ಕೆ ಇದಯೇ?

ಬ) ಹಾಗಿದ್ದಲ್ಲಿ ಈ ಕೆಲಸಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಇ) ಇದಕ್ಕೆ ಇದುವರೆವಿಗೂ ಏನಾದರೂ ಹಣವನ್ನು ಬಿಡುಗಡೆ ಮಾಡಿದೆಯೇ? ಹಾಗಿದ್ದಲ್ಲಿ ಒಟ್ಟು ಎಷ್ಟು ಹಣವನ್ನು ಬಿಡುಗಡೆ ಮಾಡಿದೆ? ಒಟ್ಟು ಅಂದಾಜು ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ತುಂಗಭದ್ರಾ ಯೋಜನೆಯ ನೀರಾವರಿ ಸಲಹಾ ಸಮಿತಿಯು ಈಗಾಗಲೇ ತೀರ್ಮಾನ ತೆಗೆದುಕೊಂಡಿರುವಂತೆ ಈ ಕೆಲಸಗಳನ್ನು ದಿನಾಂಕ 1-4-96 ರಿಂದ 15-6-1996ರ ವರಗೆ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹೌದು, ಬಿಡುಗಡೆ ಮಾಡಲಾಗಿದೆ. 31-1-96ರವರೆಗೆ ಈ ಕೆಲಸಗಳಿಗೆ ರೂ. 1.45 ಕೋಟಿ ಬಿಡುಗಡೆ ಮಾಡಿದೆ.

ಈ ಕಾಮಗಾರಿಗಳಿಗೆ ತಗಲುವ ಒಟ್ಟು ಅಂದಾಜು ವೆಚ್ಚ ರೂ. 19.665 ಕೋಟಿ.

ತುಂಗಭದ್ರಾ ಎಡದಂಡೆ ಕಾಲುವೆ ದುರಸ್ಥಿ

677 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ 18ನೇ ಮೈಲಿನಲ್ಲಿ ರಂಧ್ರವೊಂದು ಕಾಣಿಸಿಕೊಂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಈ ರಂಧ್ರ ಮುಚ್ಚುವಲ್ಲಿ ಸರ್ಕಾರ ಯಶಸ್ವಿಯಾಗಿದೆಯೇ

ಇ) ಇದಕ್ಕಾಗಿ ಆದ ಒಟ್ಟು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಪ್ರಸ್ತುತ ನೀರಾವರಿ ವರ್ಷದಲ್ಲಿ ಮೈಲ್ 18ರಲ್ಲಿ ಯಾವುದೇ ರಂಧ್ರವಾಗಿರುವುದಿಲ್ಲ.

ಆ) ಯಾವುದೇ ರಂಧ್ರ ಕಾಣಿಸದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಯಾವುದೇ ಖರ್ಚು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಕ್ಷಕ ಉಪ ನಿರೀಕ್ಷಕರ ನೇಮಕಾತಿ.

678 - ಶ್ರೀ ಅಮರೇಗೌಡ ಪಾಟೀಲ್ (ಲಿಂಗಸುಗೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?